ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1611

ಉತ್ತರಿಸಬೇಕಾದ ದಿನಾಂಕ : 20.03.2020.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ.	ವಿಜಯಪುರ ಜಿಲ್ಲೆಯಲ್ಲಿ ಖಿಲಾರಿ ತಳಿಯಾ ದೇಶಿ ತಳಿಯು ಇಂದಿನ ದಿನಮಾನಗಳಲ್ಲಿ ನಶಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ತಳಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಹೌದು. ಖಿಲಾರಿ ತಳಿ ಹಸುವನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.
ಆ	ವಿಜಯಪುರ, ಬಾಗಲಕೋಟೆ ಮತ್ತು ಮಹಾರಾಷ್ಟ್ರದ ಸಾಂಗಲಿ ಮತ್ತು ಸೊಲ್ಲಾಪುರ ಜಿಲ್ಲೆಗಳಲ್ಲಿ ಆದಿಕಾಲದಿಂದಲೂ ಬದುಕಿ ಬಂದ ಈ ತಳಿಗಳ ಹಸುವಿನ ಪುನರುಜ್ಜೀವನ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ;	ಖಿಲಾರಿ ತಳಿ ಹಸುವಿನ ಪುನರುಜ್ಜೀವನಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ.
ಇ	ಸದರಿ ತಳಿಯ ಹೋರಿಗಳು ಮತ್ತು ಹಸುಗಳಿಂದ ಯಾವ ಯಾವ ರೀತಿಯಲ್ಲಿ ರೈತರಿಗೆ ಮತ್ತು ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆ ಎಂಬುದು ಸರ್ಕಾರದ ಗಮನದಲ್ಲಿದೆಯೇ;	ಖಿಲಾರಿ ತಳಿ ಹೋರಿಗಳು ರೈತರಿಗೆ ಕೃಷಿ ಸಂಬಂಧಿತ ಕೆಲಸಗಳಿಗೆ ಸಹಕಾರಿಯಾಗಿವೆ ಹಾಗೂ ಸದರಿ ತಳಿ ಹಸುವಿನ ಹಾಲು ಉತ್ಕೃಷ್ಠ ಗುಣಮಟ್ಟದ್ದಾಗಿದ್ದು, ಆರೋಗ್ಯಕ್ಕೆ ಒಳ್ಳೆಯದು ಎಂಬುದು ಸರ್ಕಾರದ ಗಮನದಲ್ಲಿದೆ.
ಈ	ಸರ್ಕಾರ ಅಮೃತ ಮಹಲ್ ಕಾಲದಲ್ಲಿ ದೇವಣಿ ತಳಿಗೆ ಬೀದರ್‌ನಲ್ಲಿ ಹಾಗೂ ಮುಧೋಳ್ ನಾಯಿಗಳಿಗೆ ಮುಧೋಳದಲ್ಲಿ ಸಂಶೋಧನಾ ಕೇಂದ್ರಗಳನ್ನು ಪ್ರಾರಂಭಿಸಿದ ರೀತಿಯಲ್ಲಿ ವಿಜಯಪುರದಲ್ಲಿ ಖಿಲಾರಿ ತಳಿಯ ಹಸುಗಳಿಗಾಗಿ ಒಂದು ಸಂಶೋಧನಾ ಹಾಗೂ ಅಭಿವೃದ್ಧಿ ಕೇಂದ್ರ ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದು;	ವಿಜಯಪುರದಲ್ಲಿ ಖಿಲಾರಿ ತಳಿ ಅಭಿವೃದ್ಧಿಗಾಗಿ ಸಂಶೋಧನಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.
ಉ	ಸದರಿ ಯೋಜನೆಗೆ ಬೇಕಾದ ಹುಲ್ಲುಗಾವಲಿನ ಪ್ರದೇಶ ಮತ್ತು ಇತರೆ ಸೌಲಭ್ಯಗಳು ಸಾಕಷ್ಟು ಇರುವುದರಿಂದ ಕೂಡಲೇ ಈ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳಲು ಮುಂದಾಗುವುದೇ?	ಅನ್ವಯಿಸುವುದಿಲ್ಲ.

ಪಸಂಮೀ 137 ಸಲೆವಿ 2020

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,